ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 335

ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 18.02.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಕ್ಷೇತ್ರದಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆ ಬೆಳೆಯಲಾಗುತ್ತಿದೆ;	ಕೊಡಗು ಜಿಲ್ಲೆಯಲ್ಲಿ ಕಿತ್ತಳೆ ಬೆಳೆಯನ್ನು 3231 ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಏಲಕ್ಕಿ ಬೆಳೆಯನ್ನು 680 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.
ಆ)	ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿಯ ವಾರ್ಷಿಕ ಉತ್ಪನ್ನ ಎಷ್ಟು; (ವಿವರ ನೀಡುವುದು)	ಜಿಲ್ಲೆಯಲ್ಲಿ ಕಿತ್ತಳೆಯನ್ನು ಅಂದಾಜು ಉತ್ಪನ್ನ 80815 ಮೆ.ಟನ್ ಮತ್ತು ಏಲಕ್ಕಿ 41 ಮೆ.ಟನ್ ಗಳಷ್ಟು ವಾರ್ಷಿಕವಾಗಿ ಉತ್ಪಾದನೆ ಮಾಡಲಾಗುತ್ತಿದೆ.
ಇ)	ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವ ಕ್ಷೇತ್ರದ ವಿಸ್ತೀರ್ಣವನ್ನು ವಿಸ್ತರಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು;	ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವ ಕ್ಷೇತ್ರದ ವಿಸ್ತೀರ್ಣವನ್ನು ವಿಸ್ತರಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ.
ಈ)	ಕಿತ್ತಳೆ ಮತ್ತು ಏಲಕ್ಕಿ ಬೆಳೆಗಳ ಪುನಃಶ್ಚೇತನ ಹಾಗೂ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	**ಕಿತ್ತಳೆ:** 1. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕೈಗೊಳ್ಳಲು ಶೇ 40 ರಂತೆ ರೂ. 40,000/-ಗಳ 4 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. 2. ಪುನಶ್ಚೇತನಕ್ಕಾಗಿ ಪ್ರತಿ ಹೇಕ್ಟೆರ್ ಗೆ ಶೇ 50 ರಂತೆ 20,000/-ರೂಗಳಿಗೆ, 4 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ ಹಾಗೂ 140 ಗಿಡಗಳಿಗೆ ರೂ 10,000/-, 145 ಕೆ.ಜಿ. Biomix, 35 ಕೆ.ಜಿ ಜೈವಿಕ ಗೊಬ್ಬರ ಮತ್ತು ಕಿತ್ತಳೆ ಸ್ಪೇಶಲ್ ಅನ್ನು ನೀಡಲಾಗುತ್ತಿದೆ.

		3. ಹನೀ ನೀರಾವರಿ ಅಳವಡಿಸಲು ಪ.ಜಾತಿ ಮತ್ತು ಪ.ಪಂಗಡ ಹಾಗೂ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ 90 ರಷ್ಟು ಮತ್ತು ಸಾಮಾನ್ಯ ರೈತರಿಗೆ ಶೇ 45 ರಷ್ಟು ಸಹಾಯಧನ ನೀಡಲಾಗುತ್ತಿದೆ. 4. ಸಮಗ್ರ ರೋಗ ಮತ್ತು ಕೀಟ ನಿರ್ವಹಣೆಗಾಗಿ ಪ್ರತಿ ಹೆಕ್ಟೇರ್ ಗೆ ರೂ 1200/- ರಂತೆ 4 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. 5. ರೈತರಿಗೆ ಕಾಲಕಾಲಕ್ಕೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ. 6. ರೈತರಿಗೆ ಕಿತ್ತಳೆ ಸಸಿಗಳನ್ನು ತೋಟಗಾರಿಕೆ ಕ್ಷೇತ್ರಗಳಲಿ ಉತ್ಪಾದಿಸಿ ಯೋಗ್ಯ ದರದಲ್ಲಿ ಒದಗಿಸಲಾಗುತ್ತಿದೆ. ಏಲಕ್ಕಿ: 1. ಸಾಂಬಾರ ಮಂಡಳಿಯ ಮುಖಾಂತರ ಏಲಕ್ಕಿ ತೋಟಗಳ ಮರುನಾಟಿ ಕಾರ್ಯಕ್ರಮಕ್ಕೆ ಸಾಮಾನ್ಯ ವರ್ಗದ ರೈತರಿಗೆ ಹಾಗೂ ಪ.ಜಾತಿ ಮತ್ತು ಪ.ಪಂಗಡ ಶೇ 33 % ಮತ್ತು ಶೇ 75 % ರಂತೆ 2 ವರ್ಷಗಳ ಅವಧಿಕೆ 75000/- ಮತ್ತು 1.68 ಲಕ್ಷಗಳ ಸಹಾಯಧನವನ್ನು ಅನುಕ್ರಮವಾಗಿ ನೀಡಲಾಗುತ್ತಿದೆ. 2. ಏಲಕ್ಕಿ ಒಣಗಿಸುವ ಯಂತ್ರ ಖರೀದಿಸಲು ಸಾಮಾನ್ಯ ಹಾಗೂ ಪ.ಜಾತಿ ಮತ್ತು ಪ.ಪಂಗಡ ರೈತರಿಗೆ ಅನುಕ್ರಮವಾಗಿ 1.50 ಲಕ್ಷ ಮತ್ತು 3.37 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.

HORTI / 65 / HGM / 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು